(3) ತಿಪಟೂರು, ಗುಬ್ಬಿ, ಬೆಳ್ಳಾವಿ ಈ ಊರುಗಳ ಹೊರಗೆ ಹೋಗುವ ಪ್ರೊವಿಷಿಯಲ್ ಮತ್ತು ಡಿಸ್ಟ್ರಿಕ್ಟ್ ಫಂಡು ರಸ್ತೆಗಳ ಮೇಲೆ ಟೋಲ್ ಸುಂಕ ವಸೂಲ್ ಮಾಡತಕ್ಕ ವಿಚಾರದಲ್ಲಿ ಸಾಕಾದಷ್ಟು ಕಾರಣ ಕಾಣಿಸಿರುವದಿಲ್ಲವೆಂತಲೂ, ಸದರಿ ಪ್ರಪೋಜಲ್ ಮಂಜೂರಾಗಲಾರದೆಂತಲೂ ಸಹಿ ನಮೂದಿರುವ 10—11—06ನೆ ಮಜ್ಕೂರ್ ನಂ. 3822—L. B. (62-06)—2ನೆ ನಂಬರ್ ಗೌರ್ನಮೆಂಟು ಆರ್ಡರು.

XXI. ತುಮಕೂರು ಎಕ್ಸಿಕ್ಯೂಟಿವ್ ಇಂಜನೀರವರಿಂದ ತಲ್ಪಿದ ಅಂದಾಜುಗಳ ಲಿಸ್ಟು ಓದಿ ಪ್ಯಾಸ್ಮಾಡಲಾಯಿತು.

XXII. ಗುಬ್ಬಿ ತಾಲ್ಲೂಕು ಮಂಚಲದೊರೆ ಗ್ರಾಮದ ಹತ್ರ ಹರಿಯುವ ಹಳ್ಳದ ಧಡವನ್ನು 300 400 ರೂಪಾಯಿಗಳ ಲಾಗೋಡಿನಿಂದ ಕಲ್ಲುಕಟ್ಟಿಸಿ ಆ ಧಡದಮೇಲೆ ಇರುವ ಮನೆಗಳಿಗೆ ಅಪಾಯ ಬಾರದಂತೆ ಭದ್ರಪಡಿಸತಕ್ಕ ವಿಚಾರದಲ್ಲಿ ತಲ್ಪಿದ ಗುಬ್ಬಿ ತಾಲ್ಲೂಕು ಅವಲ್‌ದಾರ್ರು ರಿ॥ ಕಳುಹಿಸಿರುವದಾಗಿ ವಗೈರ ನಮೂದಾದ ಗುಬ್ಬಿ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರೆ 30—11—06ನೆ ಮಜ್ಕೂರ್ 356ನೆ ನಂಬರ್ ಯಾದಿ ಓದಲಾಯಿತು.

ಅಪ್ರೂವ್ ಮಾಡಿರುತ್ತೆಂತಲೂ ಬೆಜಟ್ಟನಲ್ಲಿ ಇತರೆ ಹೆಡ್ಡಿಗೆ ಮಂಜೂರಾಗಿರುವ ಹಣದಿಂದ ಈ ಕಾಂಗಾರಿಗೆ 300 ರೂಪಾಯಿಗಳು ರಿ—ಅಪ್ರೊಪ್ರಿಯೇಷನ್ ಮೂಲಕ ಕೊಡಬಹುದೆಂತಲೂ ಸಹಾ ತೀರ್ಮಾನಿಸಲಾಯಿತು.

XXIII. ತಿರುಮಣಿಲಿರುವ ಟ್ರಾವಲರ್ಸ್ ಬಂಗ್ಲೆಯನ್ನು ರಿಪೇರಿ ಮಾಡಿ ಅದನ್ನು ಮುಸಾಫರಖಾನೆಯನ್ನು ಮಾಡತಕ್ಕ ಬಾಬ್ತು ಮದ್ದಗಿರಿ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ಪ್ರಪೋಜಲ್, ಸದರಿ ಕಟ್ಟಡವು ಬಹಳ ಹಳೇದು ಶಿಥಿಲವಾಗುತ್ತಲಿದೆ. ಅದು ಸಂಪೂರ್ತಿಯಾಗಿ ಶಿಥಿಲವಾಗದಂತೆ ಇರಲು ಅದಕ್ಕೆ ಜಾಗ್ರತೇಲಿಯೇ ನಿಗೆ ಕೊಡಬೇಕಾಗಿರುತ್ತೆ. ಮಧ್ಯಭಾಗದ ಕೊಠಡಿಗೆ ಮೇಲ್ಛಾವಣಿಯಿಲ್ಲ. ಮಗ್ಗಲು ಕೊಠಡಿಗಳಿಗೆ ತಾರಸಿ ಮಾಡಿರುತ್ತೆ. ಅವುಗಳನ್ನು ರಿಪೇರಿ ಮಾಡಿ ಮುಸಾಫರಖಾನೆಯಾಗಿ ಮಾಡಬಹುದು. ಉಭಯ ಪಾರ್ಶ್ವಗಳ ಮಧ್ಯೆ ಇರುವ ಕೊಠಡಿಯ ಪ್ರದೇಶವೇ ಅಂಗಳವನ್ನಾಗಿ ಮಾಡಬಹುದು. ಈ ಬಗ್ಗೆ 500 ರೂಪಾಯಿಗಳು ಮಂಜೂರಾಗಬಹುದು.

ಆ ತಾಲ್ಲೂಕಿನ ಈ ಪ್ರಾಂತ್ಯದಲ್ಲಿ ಮುಸಾಫರಗಳಿಗೆ ಸ್ಥಳ ಬೇಕಾಗಿರುವದು ಅವಶ್ಯಕವಾಗಿರುತ್ತಾಗಿ ಈ ಪ್ರಪೋಜಲ್ ಅಪ್ರೂವ್ ಮಾಡಿರುತ್ತೆಂತ ತೀರ್ಮಾನಿಸಲಾಯಿತು.

XXIV. ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮಿಟಿಂಗ್ ಸ್ ೧೯೦೭ನೆ ಇಸವಿ ಫೆಬ್ರವರಿ ತಾರೀಖು 15ರಲ್ಲು ಮಧ್ಯಾನ್ಹ 3 ಘಂಟೆಗೆ ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ದೊರೆಸ್ವಾಮಿ ಅಯ್ಯರ್,
ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟ್.

ಸ್ ೧೯೦೬ನೆ ಡಿಸೆಂಬರ್ 10ನೆ ತಾರೀಖಿನಲ್ಲಿ ಹಾಸನದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಸಭೆ ಸೇರಿ ನಡಿಸಿದ ಪ್ರೊಸಿಡಿಂಗ್ಸ್.

ಹಾಜರು.

ಪಿ. ಆರ್. ಡಬ್ಲ್ಯೂ. ವೆದರಾಲ್, ಎಸೊಕ್ಯೈರ್‌ರವರು, ಡಿ॥ ಬೋ॥ ಪ್ರೆಸಿಡೆಂಟ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ॥ ಸೈಯದ್ ಅಮೀರ್‌ಹುಸೇನ್, ಸಕಲೇಶಪುರದ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು.
ಎಂ. ಎ. ನಾರಸಿಂಹಯ್ಯಂಗಾರ್‌ರವರು, ಬಿ. ಎ. ಬಿ. ಎಲ್., ಜನರಲ್ ಅಸಿಸ್ಟೆಂಟ್ ಕಮಿಷನರವರು.
ಟಿ. ಧರ್ಮರಾಜಶೆಟ್ಟ್ಯರು, ಟೇಜರಿ ಅಸಿಸ್ಟೆಂಟ್ ಕಮಿಷನರು ಮತ್ತು ಡಿ॥ ಬೋ॥ ವೈಸ್ ಪ್ರೆಸಿಡೆಂಟರವರು.
,, ಎಫ್. ಎ. ಸ್ಟೀಲ್ ಸಾಹೇಬರವರು, ಹಾಸನ ಡಿ॥ ಎಗ್ಜಿಕ್ಯೂಟಿವ್ ಇಂಜನೀಯರ್.

ನ್ಯಾ॥ ಅಫಿಷಿಯಲ್ ಮೆಂಬರುಗಳು.

ಮೆ॥ ಲಕ್ಷ್ಮೀನರಸಿಹ್ಮಾಚಾರ್ಯರು.	ಮೆ॥ ಧರಪ್ಪಯ್ಯಶೆಟ್ಟ್ಯ.
ಕೋಣೆ ಮಹದೇವಪ್ಪನವರು.	,, ವೆಂಕಟರಾಮಯ್ಯನವರು.
,, ಡಬ್ಲ್ಯೂ. ಎಲ್. ಕಾಫರ್ಡ್ ಸಾಹೇಬರವರು.	,, ಸೂರ್ಯನಾರಾಯಣಶೆಟ್ಟ್ಯ.
,, ಐನೂರು ಮಲ್ಲೆಗೌಡರು.	,, ಮಹಲಿಂಗೆಗೌಡರು.
,, ಹ. ದಾಸಪ್ಪನವರು.	,, ಅಬ್ದುಲ್ಲಾಸಾಬರು.
,, ಜೆ. ತಿರುನಾರಸಿಹ್ಮಯ್ಯಂಗಾರ್‌ರವರು.	,, ಗುರುಲಿಂಗೆಗೌಡರು.
,, ನಂಜಂಡಣನವರು.	

ಗೈರ್ ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ॥ ಸಿ. ರಾಜಾರಾಮರಾವ್, ಎಲ್. ಎಂ. ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
,, ಎಂ. ಕೆ. ತಿರುಮಲಾಚಾರ್ಯರು, ಬಿ. ಎ., ಸ್ಕೂಲ್‌ಗಳ ಡಿಪ್ಯೂಟಿ ಇನ್ಸ್‌ಪೆಕ್ಟರು.

ನಾರ್ ಅಫಿಷಿಯಲ್ ಮೆಂಬರುಗಳು.

ಮೆ॥ ಸುಂಡೇಕೆರೆ ಶ್ರೀಕಂಠೈಯ್ಯನವರು, (ಗತಿಸಿ ಹೋಗಿರುತ್ತಾರೆ)

ಮೆ॥ ಕೆ. ತಮ್ಮಯ್ಯ. | ಮೆ॥ ಕೆಂಚರಾಯಶೆಟ್ಟು.
,, ಹಬಿಬುಲ್ಲಾಸಾಬರು. | ,, ಕೋನೇರಿ ರಾವುಶೆಟ್ಟರು.

I. ಹಾಸನದಲ್ಲಿ ವೆಸ್ಲಿಯಂ ಮಿಷ್ಟರವರ ಕಟ್ಟಿಸಿರುವ ಹೆಂಗಸರು ಮತ್ತು ಮಕ್ಕಳ ಆಸ್ಪತ್ರೆ ನಡಿಯುವದಕ್ಕೂ ಆಸ್ಪತ್ರೆ ಪ್ರತಿ ಮಾಹೆಯಲ್ಲೂ 200 ರೂ. ಕೊಡಬೇಕೆಂಬ ಅಂಶದಲ್ಲಿ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡಿ ಅಭಿಪ್ರಾಯವನ್ನು ರಿಪೋರ್ಟು ಮಾಡಬೇಕೆಂತಲೂ ಕೊಡಲು ಬಪ್ಪಿದಲ್ಲಿ ಯಾವ ಸೋರ್ಸಿನಿಂದ ಕೊಡಬಹುದೆಂಬ ಬಗ್ಯೆ ರಿಪೋರ್ಟು ಅಪೇಕ್ಷಿಸಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಂದ ತಲ್ಪಿದ 8—10—06ರ ಮರ್ಕುಂ 2797 — ಮೈ. ಎಫ್. 86—06—2ನೆ ನಂಬರ್ ಡಾಕೆಟ್ಟು ಓದಲಾಯಿತು.

ತೀರ್ಮಾನ: —ಪ್ರಸಕ್ತವಾದ ಆಸ್ಪತ್ರೆಯ್ಯು ಸಹಾಯ ಹೊಂದಲು ಅರ್ಹವಾಗಿರುವದನ್ನು ಬೋರ್ಡಿನವರು ಚನ್ನಾಗಿ ಗ್ರಹಿಸಿದ್ದಾಗ್ಯೂ (ಸಾಲೆಯಾನಾ 200 ರೂಪಾಯಿಗಳಿಗಿಂತ ಇದಕ್ಕೆ ಹೆಚ್ಚಾಗಿ ಕೊಡಲು ಸಾಧ್ಯವಿಲ್ಲವೆಂತಲೂ) ಹಾಲೀ ಇರುವ ಸರ್ಕಾರದ ಹೆಂಗಸರ ಡಿಸ್ಪೆನ್ಸರಿಗೋಸ್ಕರ ತಗಲುವ ಖರ್ಚು ಪೈಕಿ $\frac{3}{4}$ ಭಾಗವಾದ 394 ರೂ. ಡಿಸ್ಟ್ರಿಕ್ಟ್ ಬೋರ್ಡಿನಿಂದ ಈಗ ಮೇಲ್ಕಂಡ ಆಸ್ಪತ್ರೆಗೆ ಸಾಲೆಯಾನ 200 ರೂಪಾಯಿಗಿಂತ ಹೆಚ್ಚಾಗಿ ಕೊಡಲು ಅವಕಾಶವಿಲ್ಲವೆಂತ ತೀರ್ಮಾನವಾಯಿತು. ಅಲ್ಲದೆ ಈ ಹಣವನ್ನು ಬರುವ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಬಜೆಟ್ಟಿನಲ್ಲಿ ದಾಖಲ್ಮಾಡಕ್ಕ ಬಗ್ಯೆ ಗೌರ್ನಮೆಂಟಿನವರ ಮಂಜೂರ್ಪಡಿಯಬೇಕೆಂತ ಸಹಾ ತೀರ್ಮಾನಿಸಲಾಯಿತು.

II. ಸೂಲಗಿತ್ತಿಯರು ತಮ್ಮ ಹೆಡ್‌ಕ್ವಾರ್ಟರ್ ಸ್ಥಳವನ್ನು ಬಿಟ್ಟು ಹೆರಿಗೆಗೋಸ್ಕರ ಇತರ ಕಡೆಗಳಿಗೆ ಹೋಗಬೇಕಾದಾಗ್ಯೆ ಇವರಿಗೆ ಮೈಲೇಜ್ ಕೊಡಬೇಕಾದದ್ದು ಅವಶ್ಯವೆಂಬ ವಗ್ಯೆರೆ ಸೀನಿಯರ್ ಸರ್ಜ್ಜನ್ ಸಾಹೇಬರವರು ಸೂಚಿಸಿರುವ ಅಂಶವನ್ನು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿಟ್ಟು ಚರ್ಚಿಸಿ ತೀರ್ಮಾನಿಸಿ ರಿಪೋರ್ಟು ಮಾಡಬೇಕೆಂತ ಗೌರ್ನಮೆಂಟಿನಿಂದ ತಲ್ಪಿದ 2—11—06ರ ಮರ್ಕುಂ 3455—65—ಮೈ. (297—05)-4ನೆ ನಂಬರ್ ಪ್ರೊಸಿಡಿಂಗ್ಸ್ ಓದಲಾಯಿತು.

ತೀರ್ಮಾನ:—ಸೂಲಗಿತ್ತಿಯರು ಗಾಡೀ ಸರಬರಾಯಿ ಮಾಡಲು ಕಷ್ಟ ಇಲ್ಲದಂಥಾ ಬಡವರ ಮನೆಗಳಿಗೆ ಹೆರಿಗೆಗೋಸ್ಕರ ಹೋದ್ದಕ್ಕೋಸ್ಕರ ಮೈಲೇಜು ಕೊಡುವದು ಅವಶ್ಯಕವೆಂದು ತಿಳಿದಾಗ್ಯೆ ಹಾಲಿ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣವಿಲ್ಲದಿರುವದರಿಂದ ಈಗ ಕೊಡಲು ಅವಕಾಶವಿಲ್ಲವೆಂದು ಹೇಳಲು ವಿಷಾದಿಸಬೇಕಾಗಿರುತ್ತೆಂತ ತೀರ್ಮಾನಿಸಲಾಯಿತು.

III. ಈ ಡಿಸ್ಟ್ರಿಕ್ಟಿನ ಕೆಲವು ಗ್ರಾಮಗಳಲ್ಲಿ ಬ್ಯಾಂಬ್ ಆಸ್ಪತ್ರೆಗಳನ್ನು ಏರ್ಪಡಿಸುವ ವಿಚಾರದಲ್ಲಿ ಸೀನಿಯರ್ ಸರ್ಜ್ಜನ್ ಸಾಹೇಬರವರ ಅಭಿಪ್ರಾಯವನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿಟ್ಟು ಅಂಥಾ ಆಸ್ಪತ್ರೆಗಳ ಸ್ಕಯೋಜನವನ್ನು ಮತ್ತು ಅವುಗಳಿಗೆ ಅವಶ್ಯಕವಾದ ಶಿಬ್ಬಂದಿ ಮತ್ತು ಔಷಧಿ ಖರ್ಚು ಮತ್ತು ಹಾಸ್ಪೆಟಲ್ ಅಸಿಸ್ಟೆಂಟರವರ ಟ್ರಾವಲಿಂಗ್ ಅಲೋಯನ್ಸ್ ಬಾಬತು ಖರ್ಚುಗಳನ್ನು ಸಹಾ ಕೊಡಲು ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪುತ್ತಾರೆಯೆ ಎಂಬ ಅಂಶದಲ್ಲಿ ತೀರ್ಮಾನಿಸಿ ಬರಿಸಬೇಕೆಂತ ಗೌರ್ನಮೆಂಟಿನಿಂದ ತಲ್ಪಿರುವ 5—11—06ರ ಮರ್ಕುಂ 3613—21—ಮೈ. (96—06)-2ನೆ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸ್ ಓದಲಾಯಿತು.

IV. ಹಾಸನ-ಅರಸೀಕೆರೆ ರಸ್ತೇವೇಲೆ ದುಡ್ಡಿದ ಬಳಿ ಇಟ್ಟಿರುವ ಟೋಲ್ ಗೇಟ್ ಮೂಲಕ ದಿನವಹಿ ಹೋಗಿ ಬರುವ ಟಾಡಿ ಕಂಟ್ರಾಕ್ಟರ್ ಅಳಿಕಿಂಗ್ಯಾಚಾರ್ಯರ ಗಾಡಿಗಳ ವೇಲೆ ಅರ್ಧ ಛಾರ್ಜಿನಂತೆ ವಸೂಲ್ಮಾಡುವುದು ರೂಲ್ಸಿಗೆ ವಿರೋಧವೆಂತಲೂ ಅಂಥಾ ಗಾಡಿಗಳಿಗೋಸ್ಕರ ಒಂದು ವೊತ್ತವನ್ನು ವರುಷ ಅಥವಾ ಆರುತಿಂಗಳಿಗೆ ನಿಷ್ಕರ್ಷೆಮಾಡಿಕೊಂಡು ಇದನ್ನು ವೊದಲೆ ಬಟ್ಟಾಗಿ ವಸೂಲ್ಮಾಡಿಕ್ಕೊಂಡ ನಂತರ ಬೈಸೆಸ್ಸು ಕೊಡತಕ್ಕದ್ದು ಯುಕ್ತವೆಂದು ವಗ್ಯೆರೆ ನವೊಂಬರ್ಳ 8—11—06ರ ಮರ್ಕುಂ 3722—ಎಸ್. ಬಿ. (141-06)-2ನೆ ನಂಬರ್ ಪ್ರೊಸಿಡಿಂಗ್ಸ್ ಓದಲಾಯಿತು.

ತೀರ್ಮಾನ:—ಟಾಡಿ ಕಂಟ್ರಾಕ್ಟರ್ ಅಳಿಕಿಂಗ್ಯಾಚಾರ್ ಮತ್ತು ಟಾಂಗ ಕಂಟ್ರಾಕ್ಟರ್ ಬಾಬಾಸಾಬರು (ವೇಲ್ ಟಾಂಗ ವಿನಹ ಬುಕ್ಕಿ ಗಾಡಿಗಳಿಗೋಸ್ಕರ) ಡಿಸ್ಟ್ರಿಕ್ಟ್ ಬೋರ್ಡಿನವರೊಂದಿಗೆ ಟೋಲ್ ಗೇಟ್ ಸುಂಕಕ್ಕೋಸ್ಕರ ಕರಾರ್ಮಾಡಿಕೊಂಡಿರುವದು ಆರು ತಿಂಗಳಿಗೆ 112½ ರೂ. ಮತ್ತು 45 ರೂಪಾಯಿಗಳಿಂತ ನಿಷ್ಕರ್ಷೆಯಿಂದ ತೀರ್ಮಾನಿಸಲಾಯಿತು.

V. ಗಂಡಸಿ ಛತ್ರವನ್ನು ಪ್ರಯಾಣಿಕರ ಉಪಯೋಗಕ್ಕೋಸ್ಕರ ಮುಸಾಫರಖಾನೆಯಾಗಿ ಉಪಯೋಗಿಸತಕ್ಕ ಬಗ್ಯೆ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಕೊಟ್ಟಿರುವದಾಗಿಯೂ ಮತ್ತು ಸದರಿ ಕಟ್ಟಡವನ್ನು ಒಳ್ಳೆ ಸ್ಥಿತಿಯಲ್ಲಿ ಇಡತಕ್ಕ ಬಗ್ಯೆ ಅವಶ್ಯಕವಾದ ರಿಪೇರಿ ವಗ್ಯೆರೆಗೋಸ್ಕರ ತಗಲುವ ಖರ್ಚನ್ನು ಡಿಸ್ಟ್ರಿಕ್ಟ್ ಬೋರ್ಡಿನವರೆ ವಹಿಸಬೇಕೆಂತ ಮುಜರೈ ಸೆಕ್ರೆಟರಿಯವರಿಂದ ತಲ್ಪಿದ 6—11—06ರ ಮರ್ಕುಂ 2351-2ನೆ ನಂಬರ್ ಪ್ರೊಸಿಡಿಂಗ್ಸ್ ಓದಲಾಯಿತು.

ತೀರ್ಮಾನ:—ಪ್ರಸಕ್ತನಾದ ಛತ್ರದ ಕಟ್ಟಡ ನಿಗೇವಾನಿಗೋಸ್ಕರ ಸದರೀ ಗಂಡಸಿ ಟ್ರಾವಲರ್ಸ್ ಬಂಗ್ಲಾದಲ್ಲಿರುವ ಝೂಡ ಮೊಲಿಗೆ ಮಾಹೇಯಾನ 6 ರೂಪಾಯಿ ತಲಬು ಬರುತ್ತಾ ಇರುವದರಿಂದ ಇವರು ಮೇಲ್ಕಂಡ ಛತ್ರದ ನಿಗೇವಾನಿ ಮಾಡುವದಕ್ಕೋಸ್ಕರ ಇನ್ನೊಂದು ರೂಪಾಯಿ ಬೆರುವ ಸಾಲ್ ಷುರು ಲಾಗಾಯತು ಕೊಡಬೇಕೆಂತಲೂ ಇದಕ್ಕೆ ಗೌರ್ನಮೆಂಟು ಮಂಜೂರಾತಿ ಪಡಿಯಬೇಕೆಂತಲೂ ತೀರ್ಮಾನಿಸಲಾಯಿತು.

VI. ಬೇಲೂರು ತಾಲ್ಲೂಕು ಅರೆಹಳ್ಳಿಲಿರುವ ಇನ್‌ಸ್ಪೆಕ್ಷನ್ ಲಾಡ್ಜ್ ಕಟ್ಟಡವನ್ನು ಮೆ॥ ಹಬಿಬುಲ್ಲಾ ಸಾಬರಿಗೆ ಪುನರಪಿ ಕೊಟ್ಟಿರುತ್ತೆಂಬದನ್ನು ವಿಲೇ ಇಡಿಸಿರುವದಾಗಿಯೂ ಮತ್ತು ಪ್ರಸಕ್ತವಾದ ಕಟ್ಟಡವನ್ನು ಸರಿಯಾದ ಸ್ಥಿತಿಯಲ್ಲಿ ಮಿ॥ ಹಬಿಬುಲ್ಲಾ

ಸಾಹೇಬರೇ ಇಟ್ಟುಕೊಂಡು ಮುನಸಫರಬಾನೆಯಾಗಿ ಉಪಯೋಗಿಸುತ್ತಾರೆಂಬ ಕಾರಣದಿಂದ 7—
3646-7—L. B. (153-06)—2ನೆ ನಂಬರ್ ಗಾರ್ನಿಮೆಂಟ್ ಪ್ರಿಂಟಿಂಗ್ಸ್ ಪ್ರೆಸ್ಸಿಗೆ ಕಳುಹಿಸಿಕೊಟ್ಟಾಯಿತು.

ತೀರ್ಮಾನ :—ಮಿ॥ ಹಬಿಬುಲ್ಲಾಸಾಹೇಬರು ಹಾತಿ ವಿಷಯಂಗಿಗೆ ಹಾಜರಿಲ್ಲದಿರುವದರಿಂದ ಮುಂದಿ
ರವನ್ನು ಆಜಬೇಕೆಂತ ತೀರ್ಮಾನಿಸಲಾಯಿತು.

VII. ಲೋಕಲ್ ಫಂಡ್ ಪಿಸ್ಟ್ ಸಾಗಿಗೆ ಸಂಬಂಧಪಟ್ಟ ಇಂಪೇಪಂಟ್ ವಾರ್ಡುಗಳನ್ನು ಅನ್ಯ
ಕೊಡ್ಲಕ್ಕೆ ಉಪಯೋಗಿಸಕ್ಕಧ್ದು ಅಲ್ಲವೆಂತ ಗಾರ್ನಿಮೆಂಟಿನಿಂದ ತಲ್ಪಿದ 9—11—06ರ ಮು
357-92-84ನೆ ನಂಬರ್ ಪ್ರೊಸೀಡಿಂಗ್ಸ್ ಓದಲಾಯಿತು.

VIII. ಸೋಮವಾರ ಪೇಟೆಯಿಂದ ಅರ್ಕಲಗೂಡು—ಕೋಣನೂರು ಮತ್ತು ನಳ್ಳೀಪುರ—ಪಿಸ್ಸ
ವಂತೆ ಕಾಲುದಾರಿಗಳನ್ನು ತಯಾರ್ಮಾಡಿಸುವ ವಿಚಾರದಲ್ಲಿ ಕೊಡಗು ಸೀಮೆಯ ಕಮಿಷ್ಟರವರಿಂದ ಮೈ
ತಲ್ಪಿರುವ ಖಿತ್ಸಿನ ನಳ್ಳು ನಿಶಿ ಗಾವರ್ನ್ಮೆಂಟಿನಿಂದ ತಲ್ಪಿರುವ 10—11—06ರ ಮುಕ್ತಾಂ 3832—
ನಂಬರು ಪ್ರೊಸೀಡಿಂಗ್ಸಿನಲ್ಲಿ ಪ್ರಸಕ್ತವಾದ ಕಾಲುದಾರಿಗಳಿಗೋಸ್ಕರ ಎಷ್ಟು ಹೊಲಗು ಬೇಕಾಗುತ್ತೆ.
ಖಚ್ಚುದು ಮತ್ತು ಈ ಕೆಲಸವನ್ನು ಯಾವಾಗ ಪೂರ್ತಿಸಬಹುದೆಂಬ ಬಗ್ಗೆ ಬೋರ್ಡು ಅಭಿಪ್ರಾಯ ತಿಳಿ
ಮೇಲಿನ ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ :—ಪ್ರಸಕ್ತವಾದ ವಿಚಾರದಲ್ಲಿ ಹಾಸನ್ನ ಡಿಸ್ಟ್ರಿಕ್ಟ್ ಎಸ್ಕಿಕ್ಯೂಟಿವ್ ಇಂಜನಿಯರ್ ಸಾ
ನಿದ ನಂತರ ಬೋರ್ಡಿನಲ್ಲಿ ಚರ್ಚೆಸಲಾಗಿ ಈ ಕಾಲುದಾರಿಗೋಸ್ಕರ ಎಸ್ಟಿಮೇಟ್ ಆ
ರಿಂದ ತಲ್ಪಿರುವ ಪ್ಲಾನ್ ಮತ್ತು ಎಸ್ಟಿಮೇಟ್ ಅನುಸಾರವಾಗಿ 2,751 ರೂಪಾಯಿಗಳ
ಇದಕ್ಕಾಗಿ ಈ ಡಿಸ್ಟ್ರಿಕ್ಟ್ ಬೋರ್ಡಿನವರು ಖರ್ಚು ಮಾಡಲು ಶಕ್ತಿ ಇಲ್ಲದ್ದರಿಂದ ಮೇ
ಲ್ ಫಂಡ್ಸ್ ಜನರಲ್‌ನಿಂದ ದಯಮಾಡಿ ಮುಂಜೂರ್ಮಾಡಿದಲ್ಲಿ ಈ ಕೆಲಸ್ತರೋಕ್ತ ಪ್ರ
ದಾರಿಗಳನ್ನು ಒಂದೇ ವರುಷದಲ್ಲಿ ಪೂರ್ತಿಸಬಹುದೆಂತ ತೀರ್ಮಾನಿಸಲಾಯಿತು.

IX. ಯೂನಿಯರ್ಗಳಲ್ಲಿ ಮನೆಗಂದಾಯದ ಬಾಬತು ಬಾಕಿ ವಸೂಲ್ಮಾಡುವದಕ್ಕೆ ಕೊಡಕ್ಕ
ಇನಂ ವಸೂಲ್ಮಾಡತಕ್ಕ ದ್ದೆಂಬ ವಿಚಾರವನ್ನು ಲೋಕಲ್ ಬೋರ್ಡ್ ರೂಲ್ಸಿನ ಅನುಭವ ಚಲ್ವಾಗಿ ತಿಳಿಯುವ
ಕೆಂಬದಾಗಿ ತಲ್ಪಿರುವ 16—11—06ರ ಮುಕ್ತಂ 3984-91—(294-06)-15ನೆ ನಂಬರ್ ಪ್ರೊಸೀ

ತೀರ್ಮಾನ :— ಕೇಳಿ ನಿಲೆ ಇಡಲಾಯಿತು.

X. ಬಿಸ್ಲೆಘಾಟ ರಸ್ತೆ ಸರಾಬ್ತಿಗಸಕ್ಕ ಬಗ್ಗೆ ಬಹಳವಾಗಿ ಹಣ ಖರ್ಚು ಮಾಡುತ್ತಿರ್ಪುದರಿಂದಲೂ
ಲೆನಾಲ್ ರಿವೆನ್ಯೂಗೋಸ್ಕರ ಜ್ಞಕಾಗುತ್ತ ಪೊಲ್ಲಲಗು ಬಿದ್ದಿಗಸುವದು ಬಹಳ ಕಷ್ಟವಾಗಿರುವಪ್ಪರಿಂದ ಸದ
ಟ್ಟೋಲ್ ಗೇಟ್ ಇಡಕ್ಕಧ್ದು ಅವಶ್ಯಕವಾದ್ದರಿಂದ ಈ ವಿಚಾರದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ರೆಸಲ್ಯೂಷ
ಕೆಂಬ ತಲ್ಪಿದ 26—11—06ರ ಮುಕ್ತಂ 4369—ಎಲ್. ಬಿ. (240-06)—1ನೆ ನಂಬರ್ ಪ್ರೊಸೀಡಿಂ

ತೀರ್ಮಾನ—ಈ ವಿಚಾರದಲ್ಲಿ ಮುಂಜಾದು ತಾಲ್ಲೂಕು ಬೋರ್ಡ್ಗಳವರ ತೀರ್ಮಾನ ಇನ್ನೂ ಸ
ಚಾರವನ್ನು ಮುಂದಿನ ವಿಸಿಟಿಂಗ್ ವೇಳೆ ಇನ್ಸ್ಪೆಕ್ಟರಕ್ಕ ಬಗ್ಗೆ ಅಕ್ಷರ್ಶ ಮಾಡಬೇಕೆಂತ

XI. ಸ್ಯಾನಿಟರಿ ಇನ್ಸ್ಪೆಕ್ಟರುಗಳು ಇವರೊಂದಿಗೆ ವರ್ಕ್ ಇನ್ಸ್ಪೆಕ್ಟರುಗಳನ್ನು ಇರಬೇಕೆಂತಲೂ
ಟರಿ ಇನ್ಸ್ಪೆಕ್ಟರುಗಳು ತಿರುಗುವ ಕೆಲಸದಲ್ಲಿ ಬಹಳವಾಗಿ ಅವಾನ್ಯಕೂಲವಾಗುತ್ತೆಂಬ ಪಬ್ಲಿಕ್ ಹೆಲ್ತ್ ಆಫೀಸರ್
ಪ್ರಪೋಜಲ್ ಗರ್ಭಿತವಾದ ಬಹು ವಿಚಾರದಲ್ಲಿ ಅಭಿಪ್ರಾಯ- ಅಪೇಕ್ಷಿಸಿ ತಲ್ಪಿದ 28—10—06ರ
ಸ್ಯಾ-(68-06)—3ನೆ ನಂಬರ್ ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ.—ಪ್ರತಿ ತಾಲ್ಲೂಕು ಬೋರ್ಡಿಗೂ ಒಬ್ಬ ಸ್ಯಾನಿಟರಿ ಇನ್ಸ್ಪೆಕ್ಟರನ್ನು ಮತ್ತು ಬು
ಇಟ್ಟುಕೊಳ್ಳುವದಕ್ಕೆ ಡಿಸ್ಟ್ರಿಕ್ಟ್ ಫಂಡ್ಸಿನಲ್ಲಿ ಹಣವಿಲ್ಲದಿರುವದರಿಂದ ಸ್ಯಾನಿಟರಿ ಇನ್ಸ್
ಕೆಲಸವನ್ನು ತನ್ನ ಕೆಲಸದೊಂದಿಗೆ ಮಾಡಬೇಕೆಂತ ತೀರ್ಮಾನಿಸಲಾಯಿತು.

XII. ಚನ್ನರಾಯಪಟ್ಟಣದ ತಾಲ್ಲೂಕು ಕೆರವಣಿ ಬೆಳಗುಳದ ಯೂನಿಯರ್ ಆಕ್ಸತ್ತಿ ಪೈಕಿ ಅ
ಕೊಡುತ್ತಾ ಇರುವದರಿಂದ ಹಣ ಕಮ್ಮಿಯಾಗಿ ಸದರಿ ಗ್ರಾಮದಲ್ಲಿ ರಾತ್ರಿವೇಳೆ ದೀಪ ಹಚ್ಚಲು ಅ
ಆದ್ದರಿಂದ ಪ್ರಸಕ್ತವಾದ ಬಾಕಿ ಅರ್ಧ ಹಣವನ್ನು ಡಿಸ್ಟ್ರಿಕ್ಟ್ ಫಂಡಿಗೆ ಸೇರಿಸಿಕೊಂಡು ಮುಖ್ಯವಾ
ಬೇಕೆಂಬ ವಗ್ಗೆರೆ ಸದರಿ ಯೂನಿಯರ್ ಪಂಚಾಯಿತರ ತೀರ್ಮಾನವನ್ನು ಜನರಲ್ ಅಸ್ಸೆಂಬ್ಲಿ ಕಮಿಷನರ್,
7—13—10—06ರ ಮುಕ್ತಂ 756-899ನೆ ನಂಬರ್ ಮೆಮೋ ಓದಲಾಯಿತು.

ತೀರ್ಮಾನ.—ಪ್ರಸಕ್ತವಾದ ವಿಚಾರದಲ್ಲಿ ಹಿಂದಿನ ಮ್ಯುನಿಸಿಪಲ್ ಮತ್ತು ಮುಜರ್ಮೆ ಬಾಬಿನ
ದ ಮುಂದಿನ ವಿಸಿಟಿಂಗಿನಲ್ಲಿ ಈ ವಿಚಾರವನ್ನು ಚರ್ಚೆಸಬೇಕೆಂತ ತೀರ್ಮಾನಿಸಲಾಯಿ

ತೀರ್ಮಾನ.—ಎಲ್ಲಾ ತಾಲ್ಲೂಕುಗಳಲ್ಲಿಯೂ ಹೆಬ್ಬಾಲೆ ಗ್ರಾಮಕ್ಕಿಂತ ದೊಡ್ಡ ಗ್ರಾಮಗಳಿದ್ದು ಅವುಗಳಿಗೆ ಝೂಡಮಾಲಿಗಳು ಬೇಕಾಗಿರುವದರಿಂದ ಈ ವಿಚಾರವನ್ನು ಇನ್ನೂ ಹಣ ವದಗಿದನಂತರ ಬಾಕಿ ಗ್ರಾಮಗಳಿಗೆ ಝೂಡಮಾಲಿಗಳನ್ನು ಕೊಡಲು ಆಲೋಚಿಸುವ ಕಾಲದಲ್ಲಿಡಬೇಕೆಂತ ತೀರ್ಮಾನಿಸಲಾಯಿತು.

XIV. ಹಾಸನ ತಾಲ್ಲೂಕು ಗ್ರಾಮದ ವೈದ್ಯಶಾಲೆಗೆ ಅವಶ್ಯಕವಾದ ಸಾಮಾನುಗಳ ಪಟ್ಟಿನಿಶಿ ಹಾಸನ ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ 3—12—06ರ ಮುಕ್ಕಂ 320-1257ನೆ ನಂಬರ್ ರಿಪೋರ್ಟು ಓದಲಾಯಿತು.

ತೀರ್ಮಾನ.—ಹಾಲ್ ಸಾಲ್ ಡಿಸ್ಟ್ರಿಕ್ಟ್ ಫಂಡು ಬಜ್ಜೆಟ್ಟಿನಲ್ಲಿ ಪ್ರಸಕ್ತವಾದ ಸಾಮಾನುಗಳನ್ನು ಗ್ರಾಮ ಮತ್ತು ಹಾರ್ನಹಳ್ಳಿ ವೈದ್ಯಶಾಲೆಗಳಿಗೋಸ್ಕರ ಸಪ್ಲೈ ಮಾಡಲು 50 ರೂಪಾಯಿಗಳು ಥಾಖಲಾಗಿರುವದನ್ನು ಮೇಲ್ಕಂಡ ಎರಡು ವೈದ್ಯಶಾಲೆಗಳ ಉಪಯೋಗ ಪ್ರತಿ ಬಂದಕ್ಕೂ 25 ರೂಪಾಯಿಗಳ ಮೇರೆ ಕೊಡಬಹುದೆಂತ ತೀರ್ಮಾನಿಸಲಾಯಿತು.

XV. ಚನ್ನರಾಯಪಟ್ಟಣ ತಾಲ್ಲೂಕು ಹಿರೀಸಾವೆ ಗ್ರಾಮದ ಉಪಯೋಗಕ್ಕೋಸ್ಕರ ಕೆಲವು ಡಸ್ಟ್ಬಿನ್ಗಳನ್ನು ಕೊಂಡು ಕೊಳ್ಳುವದು ಅವಶ್ಯಕವೆಂತ ಜನರಲ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿದ 9—11—06ರ ಮುಕ್ಕಂ 927—1083ನೆ ನಂಬರ್ ಯಾದಿ ಓದಲಾಯಿತು.

ತೀರ್ಮಾನ.—ಹಾಲ್ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟಿನಲ್ಲಿ VI ಕನ್ಸರ್ವೆನ್ಸಿ ಮತ್ತು ಸ್ಯಾನಿಟರಿ ಖರ್ಚು (b) ಗೊಬ್ಬರ ಗುಂಡಿಗಳನ್ನು ಮುಚ್ಚುವದಕ್ಕೋಸ್ಕರ ದಾಖಲಾಗಿರುವ 300 ರೂಪಾಯಿಗಳ ಪೈಕಿ 35 ರೂಪಾಯಿ ಮೆಂಜೂರ್ ಮಾಡಬಹುದೆಂತ ತೀರ್ಮಾನಿಸಲಾಯಿತು.

XVI. ಈ ತಾರೀಖ್ಕಿಯಲ್ಲಿ ಕಂಡ ಬಜ್ಜೆಟ್ಟಿನಲ್ಲಿ ದಾಖಲಾದ ಕೆಲಸಗಳ ಬಾಬತು ಅಂದಾಜಾಗಳು.

ತಾಲ್ಲೂಕು ಮತ್ತು ಕೆಲಸದ ಹೆಸರು.	ಅಂದಾಜಾ ಮೊಬಲಗು.	ಷರಾ.
ಮೆಂಜರಾಬಾದು ತಾಲ್ಲೂಕು.		
ಹೆತ್ತೂರು ಮುಸಾಫರಿಖಾನಾ ರಿಪೇರಿ	200	ಮಂಜೂರು.
ಹನಸೆ ಕನಿವಾಶ ಸಂತೆ ರಸ್ತೆ ರಿಪೇರಿ	40	ಡಿಟೋ
ಪೂರ್ನಹಳ್ಳಿ ಛತ್ರಕ್ಕೆ ಬಾಟು ಕಾಂಗಾರಿ	11	ಡಿಟೋ
ಅರಸೀಕೆರೆ ತಾಲ್ಲೂಕು.		
ಮೂಲೇಕಲ್ ತಿರುಪತಿಬೆಟ್ಟಿಲ್ಲಿ ಭಾವಿ ತೆಗೆಯುವದಕ್ಕೆ. ...	600	ಅನುಮೋದಿಸಿದೆ. ಗಾರ್ನಮೆಂಟ್ ಮಂಜೂರು ಪಡೆಯಬೇಕು.
ಬಾಣಾವಾರದಲ್ಲಿ ರಸ್ತೆ ರಿಪೇರಿ ...	300	ಮಂಜೂರು.
ಹಾರನಹಳ್ಳಿ ಚಿರಂಡಿ ರಿಪೇರಿ	25	ಡಿಟೋ
ಚನ್ನರಾಯಪಟ್ಟ ತಾಲ್ಲೂಕು.		
ಶ್ರೀನಿವಾಸಪುರದಲ್ಲಿ ಕೇದೂ ಭಾವಿಗೋಸ್ಕರ	369	ಡಿಟೋ
ದ್ಯಾವಲಾಪುರದ ಭಾವಿ ಆಳಪಡಿಸಿ ಕಲ್ಲುಕಟ್ಟುವದಕ್ಕೋಸ್ಕರ ...	368	ಡಿಟೋ
ರಾಂಪುರದಲ್ಲಿ ಡಿಟೋ ...	297	ಡಿಟೋ
ರಾಜೇನಹಳ್ಳಿ ಕೇದೊಭಾವಿಗೋಸ್ಕರ ...	360	ಮನ್ನಾ ಮಾಡಿರುತ್ತೆ.
ಹೊಳೇನರಸೀಪುರ ತಾಲ್ಲೂಕು.		
ಕನ್ನಂಬಾಡಿ ಭಾವಿ ಆಳ ಮತ್ತು ಅಗಲಪಡಿಸುವದಕ್ಕೆ ...	300	ವಾಗ್ದಾನ ಮಾಡಿರುವ 97 ರೂಪಾಯಿ ಕಂಟ್ರಿಬ್ಯೂಷನ್ ವಸೂಲಾಗುವ ವರಿಗೆ ಮನ್ನಾ ಮಾಡಿರುತ್ತೆ.
ಆಲೂರು ಸಬ್ ತಾಲ್ಲೂಕು.		
ಭರತೂರು ದೊಡ್ಡಿ ರಿಪೇರಿ	100	ಮಂಜೂರು.

XVII. ಅರಸೀಕೆರೆ ತಾಲ್ಲೂಕು ಹರನಕಟ್ಟೆ ಗ್ರಾಮದಲ್ಲಿ ಗ್ರಾಮಸ್ಥರು ಬಂದು ಭಾವಿಗೆ ಮಣ್ಣಿನ ಕೆಲಸವನ್ನು 300 ರೂಪಾಯಿ ವಂಗೆ ಮಾಡಿ ಇದಕ್ಕೆ ಕಲ್ಲುಕಟ್ಟಿಸುವದಕ್ಕೋಸ್ಕರ 50 ರೂಪಾಯಿ ಕಂಟ್ರಿಬ್ಯೂಷನ್ ಕೊಟ್ಟಿರುವದು ಡಿವಾಜಟ್ಟಿನಲ್ಲಿರುತ್ತೆ. ಆದ್ದರಿಂದಲೂ ಭಾವಿಗೆ ಕಲ್ಲುಕಟ್ಟುವದಕ್ಕೆ 298 ರೂಪಾಯಿ ಬಾಬತು ಬಜ್ಜೆಟ್ಟಿನಲ್ಲಿ ದಾಖಲಾಗದ ಅಂದಾಜನಿಶಿ ಜನರಲ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿದ 21—9—06ರ ಮುಕ್ಕಂ 648—777ನೆ ನಂಬರ್ ಯಾದಿ ಓದಲಾಯಿತು.

ತೀರ್ಮಾನ.—ಹಾಲ್ಸಾಲ್ ಬಜ್ಜೆಟ್ಟಿನಲ್ಲಿ ಹಣ ವಿಲ್ಲದಿರುವದರಿಂದ ಖರುವ ಸಾಲ್ ಬಜ್ಜೆಟ್ಟಿನಲ್ಲಿ ದಾಖಲ್ಮಾಡಬೇಕೆಂತ ತೀರ್ಮಾನಿಸಲಾಯಿತು.

XVIII. ಕೆಳಗೆ ಕಾಣಿಸಿರುವ ಮೆಂಬರುಗಳು ಈ ಮಿಟಿಂಗಿಗೆ ಬರಲು ಅನಾನುಕೂಲವೆಂತ ಬರಸಿರೆವೆ ಬತ್ತು ಗಳನ್ನು ಓದಲಾಯಿತು.

1. ಮೆ॥ ಎಂ. ಕೆ. ತಿರುಮಲಾಚಾರ್ಯರು, ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರು.
2. ,, ಕೆ. ತಮ್ಮಯ್ಯನವರು.
3. ,, ಹಬೀಬುಲ್ಲಾ ಸಾಹೆಬರು.
4. ,, ಕೋನೇರಿ ರಾಮಚಟ್ಟರು.

ತೀರ್ಮಾನ.—ಕೇಳಿ ವಿಲೆ ಇಡಸಲಾಯಿತು.

XIX. ಈ ಡಿಸ್ಟ್ರಿಕ್ಟ್ ಬೋರ್ಡು ಮೆಂಬರಾಗಿದ್ದ ಮೆ॥ ಸುಂಡೇಕೆರೆ ಶ್ರೀಕಂಠೈಯ್ಯನವರು ಕ್ಷಾಲವಾಗಿರುತ್ತಾರೆಂತ ತಲ್ಪಿದ 2—12—06ರ ನಮ್ಮ ನಂ 1411ನೆ ನಂಬರ್ ರಿಪೋರ್ಟು ಮಂಜರಾಬಾದು ತಾಲ್ಲೂಕು ಅಮಲ್ದಾರ್ರ ರಿಪೋರ್ಟು ಪರಾಂ ಬರಿಸಲಾಯಿತು.

ತೀರ್ಮಾನ.—ಮೆ॥ ಶ್ರೀಕಂಠೈಯ್ಯನವರು ಮಂಜರಾಬಾದು ತಾಲ್ಲೂಕಿನಲ್ಲಿ ಬಹಳ ದಿವಸದಾರಭ್ಯ ಕಾಫಿ ಪ್ಲಾಂಟರಾಗಿದ್ದು ಮತ್ತು ಈ ಡಿಸ್ಟ್ರಿಕ್ಟ್ ಬೋರ್ಡ ಮೆಂಬರಾಗಿದ್ದು ಈಗ ಕಾಲವಾದರೆಂಬ ವರ್ತಮಾನ ಕೇಳಿ ಬೋರ್ಡಿನವರು ಬಹಳವಾಗಿ ವಿಷಾದಿಸುವದಲ್ಲದೆ ಈ ಅಂಶವನ್ನು ಕುರಿತು ಮೆ॥ ಸುಂಡೇಕೆರೆ ಶ್ರೀಕಂಠೈಯ್ಯನವರ ಕುಟುಂಬಕ್ಕೆ ತಿಳಿಸಬೇಕೆಂತ ತೀರ್ಮಾನಿಸಲಾಯಿತು.

ಲೋಕಲ್ ಬೋರ್ಡ ರೂಲ್ಸಿನ 17 (1)ನೆ ರೂಲ್ ಅನುಸರಿಸಿ ಸ್ವಲ್ಪದಿವಸದಲ್ಲಿ ಮೆಂಬರುಗಳ ಹೊಸ ಚುನಾವಣೆ ಆಗಬೇಕಾಗಿರುವದರಿಂದ ಸದ್ಯಕ್ಕೆ ಮೆ॥ ಶ್ರೀಕಂಠೈಯ್ಯನವರ ಏವಜಿಗೆ ಬೆಳ್ಳೂರು ಮಂದೇ ಪಟೇಲ ನಂಜೇಗೌಡ ಉರುಫ್ ಪುಟ್ಟೇಗೌಡರನ್ನು (ಮಂಜರಾಬಾದು ತಾಲ್ಲೂಕು ಬೋರ್ಡ ಮೆಂಬರು) 10ನೆ ರೂಲ್ಸ ಪ್ರಕಾರ ಸೊಕರೂರ್ಮಾಡಬೇಕೆಂತ ಗವರ್ನ್‌ಮೆಂಟಿಗೆ ಬರಸಬೇಕಾಗಿ ತೀರ್ಮಾನಿಸಲಾಯಿತು.

XX. ಬರುವ ಡಿಸ್ಟ್ರಿಕ್ಟ್ ಬೋರ್ಡ ಮಿಟಿಂಗನ್ನು ಸ್ಯ 1907ನೆ ಇಸವಿ ಫೆಬ್ರವರಿ ಮಾಹೆ ತಾರೀಖು 18ನೆ ಸೋಮವಾರ ಮಧ್ಯಾನ್ಹಾತ್ಪರ 2 ಘಂಟೆಗೆ ನಡಿಸಬೇಕೆಂತ ತೀರ್ಮಾನಿಸಲಾಯಿತು.

ಪಿ. ಆರ್. ಡಬ್ಲ್ಯೂ. ವೆದರಾಲ್,
ಪ್ರೆಸಿಡೆಂಟ್.

ಬೆಂಗಳೂರು ಸೆಂಟ್ರಲ್ ಜೈಲ್.

ನೋಟಿಸ.

ತಾರೀಖು 13ನೆ ಡಿಸೆಂಬರ 1906.

ನೋಟಿಸ ಮೂಲಕ ತಿಳಿಯಪಡಿಸುವದೇನೆಂದರೆ :—1907ನೆ ಇಸವಿ ಫೆಬ್ರವರಿ ಗುರ್ಮಿಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖು ವರಿಗೂ ಜೈಲ್‌ನಲ್ಲಿ ತಯಾರಾಗತಕ್ಕ ಸಾರ್ಮಾಗಳಿಗೆ ಬೇಕಾದಂಥಾ ಎಲ್ಲಾ ರಟಂ ತುಪಟಗಳು ಮತ್ತು ಇತರ ಸಾಮಾನುಗಳನ್ನು ಹಾಜರುಮಾಡಲು ಕಂಟ್ರಾಕ್ಟ ಪಡಿಯಲು ಇಷ್ಟವುಳ್ಳವರಿಂದ ಹಾಜರ್ತಡಲ್ಪಡುವ ಟೆಂಡರುಗಳನ್ನು ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1907ನೆ ಇಸವಿ ಜನವರಿ 15ನೆ ತಾರೀಖು ಮಂಗಳವಾರ ದಿವಿ 10 ಘಂಟೆವರಿಗೆ ಅಂಗೀಕರಿಸುವರು.

ಕಂಟ್ರಾಕ್ಟಿನ ತಪಶೀಲುವಾರು ಮೈಸೂರ ಗೆಜೆಟ್ ಡಿಸೆಂಬರ 20ನೆ ತಾರೀಖಿನಲ್ಲಿ ಘಾಯಿಷ್ ಮಾಡಲ್ಪಟ್ಟು ಇರುತ್ತೆ.

ತಾರೀಖು 13ನೆ ಡಿಸೆಂಬರ 1906.

ಇದರಿಂದ ತಿಳಿಯಪಡಿಸುವದೇನೆಂದರೆ :—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದುಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಗೆ ಸ್ಯ 1907ನೆ ಇಸವಿ ಫೆಬ್ರವರಿ ಗುರ್ಮಿಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖುವರಿಗೆ ಧಾನ್ಯ ಮುಸಾಲೆ ಜಿನಸುಗಳೂ ಮತ್ತು ಇತರ ಅವಶ್ಯಕವಾದ ಪದಾರ್ಥಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬೆರೆವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಸ್ಯ 1907ನೆ ಇಸವಿ ಜನವರಿ ತಾರೀಖು 15ನೆ ಮಂಗಳವಾರ 10 ಘಂಟೆವರಿಗೂ ತೆಗದುಕೊಳ್ಳಲ್ಪಡುವವು.

ಸರಬರಾಯಿ ಆಗತಕ್ಕ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1906ನೆ ಇಸವಿ ಡಿಸೆಂಬರ 20ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಡಿರುತ್ತದೆ.

ತಾರೀಖು 13ನೆ ಡಿಸೆಂಬರ 1906.

ಇದರಿಂದ ತಿಳಿಯಪಡಿಸುವದೇನೆಂದರೆ :—ಸ್ಯ 1907ನೆ ಇಸವಿ ಫೆಬ್ರವರಿ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖುವರಿಗೆ (ಆ ಎರಡು ದಿವಸಗಳೂ ಸೇರಿ) 12 ತಿಂಗಳ ತನಕ ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಸವದೆ ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ ಕವರಿನಲ್ಲಿಹಾಕಿ ಮೊಹರುಮಾಡಿದ ದರಖಾಸ್ತುಗಳನ್ನು ಸ್ಯ 1907ನೆ ಇಸವಿ ಜನವರಿ 15ನೆ ತಾರೀಖು ಮಂಗಳವಾರ ಬೆಳ್ಗೆ 10 ಘಂಟೆವರಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಘಾಯಿಷ್ ಮಾಡಿದೆ.

ಸರಬರಾಯಿ ಆಗಬೇಕಾದ ಸವದೆ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟ ಮಾಡಿಯಿರುತ್ತದೆ.

ಪಿ. ಎಸ್. ಅಚ್ಚುತರಾವ್,
ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್.